ಶ್ರೀ ಎಸ್.ಆರ್. ಬೊಮ್ಮಾಯಿ (ಮಾನ್ಯ ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೇ, ನಾನು ಮಾನ್ಯ ಪಿ.ಡಬ್ಲ್ಯೂ.ಡಿ. ಮಂತ್ರಿಗಳ ಗಮನಕ್ಕೆ ಈ ವಿಚಾರವನ್ನು ತಂದು ಇದಕ್ಕೆ ಉತ್ತರ ಕೊಡಿಸುತ್ತೇನೆ.

(10) REG. MINI WATER SUPPLY SCHEME TO WALKI IN CHIKKODI TALUK

— — —

SRI VEERAKUMAR A. PATIL (Nippani).—Mr. Speaker Sir, The Mini water supply scheme to Walki in Chikkodi Taluk is almost completed and it is lying idle for want of suitable submersible pumps. Even after a lapse of three months the villages are not getting the benefit. Hence I urge the Govenment to direct the concerned to install a suitable pump and help the villagers to have drinking water facility.

ಶ್ರೀ ಎಸ್.ಆರ್. ಬೊಮ್ಮಾಯಿ(ಮಾನ್ಯ ಕಂದಾಯ ಸಚಿವರು).—ಮಾನ್ಯ ಅಧ್ಯಕ್ಷರೇ, ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಮೇಲ್ಮನೆಯಲ್ಲಿದ್ದಾರೆ. ಅವರಿಂದ ಉತ್ತರವನ್ನು ಆದಷ್ಟು ಬೇಗ ಕೊಡಿಸುತ್ತೇನೆ.

(11) ಗುಡಗೇರಿ ಗ್ರಾಮದ ಸರಕಾರಿ ಜೂನಿಯರ್ ಕಾಲೇಜಿಗೆ ವಿಜ್ಞಾನ ಉಪಕರಣಗಳನ್ನು ಒದಗಿಸುವ ವಿಚಾರ

ಶ್ರೀ ಬಸಪ್ಪ ಅಂದಾನಪ್ಪ ಉಪ್ಪಿನ್ (ಕುಂದಗೋಳ್).—ಮಾನ್ಯ ಅಧ್ಯಕ್ಷರೇ, ನನ್ನ ತಾಲ್ಲೂಕಿನ ಗುಡಗೇರಿ ಗ್ರಾಮದಲ್ಲಿ ಸರಕಾರಿ ಜೂನಿಯರ್ ಕಾಲೇಜ್ ಇದೆ. ಅಲ್ಲಿಕಲೆ, ವಿಜ್ಞಾನ ಹಾಗೂ ವಾಣಿಜ್ಯ ಮತ್ತು ಶಿಕ್ಷಣ ವಿಷಯಗಳನ್ನು ಕಲಿಸುವ ವ್ಯವಸ್ಥೆ ಇದೆ. ವಿಜ್ಞಾನ ಶಾಸ್ತ್ರವನ್ನು ಉತ್ತಮ ರೀತಿಯಿಂದ ಬೋಧಿಸಬೇಕಾದರೆ, ಭೌತಶಾಸ್ತ್ರ, ರಸಾಯನ ಶಾಸ್ತ್ರ ಹಾಗೂ ಜೀವಶಾಸ್ತ್ರ ಬೋಧಿಸಲಿಕ್ಕೆ ಅನೇಕ ವಿಜ್ಞಾನ ಉಪಕರಣಗಳು ಬೇಕಾಗುತ್ತವೆ. ಆದರೆ ಕಾಲೇಜಿನಲ್ಲಿ ಒಂದೂ ವಿಜ್ಞಾನದ ಉಪಕರಣಗಳು ಇರುವುದಿಲ್ಲ. ಅಲ್ಲಿಯ ಉಪನ್ಯಾಸಕರ ಅಂದಾಜಿನಂತೆ ಸುಮಾರು ೮೦ ಸಾವಿರ ರೂಪಾಯಿಗಳ ಉಪಕರಣಗಳು ಬೇಕಾಗುತ್ತವೆ. ಕಾರಣ ಪ್ರಸಕ್ತ ವರ್ಷದಲ್ಲಿ ಕೊನೆಯ ಪಕ್ಷ ೪೦ ಸಾವಿರ ರೂಪಾಯಿಗಳನ್ನಾದರೂ ವಿಜ್ಞಾನ ಉಪಕರಣಗಳನ್ನು ಖರೀದಿಸಲಿಕ್ಕೆ ಅವಕಾಶ ಮಾಡಿಕೊಡ ಬೇಕೆಂದು ಮಾನ್ಯ ಶಿಕ್ಷಣ ಮಂತ್ರಿಗಳಲ್ಲಿ ವಿನಂತಿಸುತ್ತೇನೆ.

ಶ್ರೀ ಡಿ. ಮಂಜುನಾಥ್ (ಶಿಕ್ಷಣ ಸಚಿವರು).—ಮಾನ್ಯ ಅಧ್ಯಕ್ಷರೇ, ಸರಕಾರಿ ಕಲಾ ಕಾಲೇಜು ಸವಣೂರು ಇಲ್ಲಿ ವಾಣಿಜ್ಯ ವಿಷಯ ಬೋಧಿಸಲು ಉಪನ್ಯಾಸಕರು.... ...

ಶ್ರೀ ಬಿ ಎ. ಉಪ್ಪಿನ್.—ಅದಲ್ಲ ನಾನು ಹೇಳಿದ್ದು, ಬೇರೆ ವಿಷಯ

ಶ್ರೀ ಡಿ. ಮಂಜುನಾಥ್.— ಸ್ವಾಮಿ, ಈಗ ನನ್ನ ಗಮನಕ್ಕೆ ಬಂದಿದೆ. ಅಲ್ಲಿ ಸಾಕಷ್ಟು ಪರ್ನಿಚರ್ ಇಲ್ಲ. ನಾನು ಈಗಾಗಲೇ ಕ್ರಮ ತೆಗೆದುಕೊಂಡಿದ್ದೇನೆ.

(ಗೊಂದಲ)

(12) ಬಿಜಾಪುರ ವ್ಯವಸಾಯೋತ್ಪನ್ನ ಮಾರುಕಟ್ಟೆ ಪ್ರದೇಶದಲ್ಲಿ ಹೊಸ ಪೋಲೀಸ್ ಠಾಣೆ ಪ್ರಾರಂಭಿಸುವ ವಿಚಾರ.

ಶ್ರೀ ಎಂ.ಎಸ್. ಉಸ್ತಾದ್(ಬಿಜಾಪುರ).—ಮಾನ್ಯ ಅಧ್ಯಕ್ಷರೇ ಮಾನ್ಯ ಗೃಹ ಮಂತ್ರಿಗಳು ಬಿಜಾಪುರ ವ್ಯವಸಾಯೋತ್ಪನ್ನ ಮಾರುಕಟ್ಟೆ ಪ್ರದೇಶದಲ್ಲಿ ಹೊಸ ಪೋಲೀಸ್ ಠಾಣೆಯನ್ನು ಪ್ರಾರಂಭಿಸುವುದಾಗಿ ಆಶ್ವಾಸನೆಯನ್ನು ಕೊಟ್ಟಿದ್ದು, ಈಗ ಅದರ ಅವಶ್ಯಕತೆ ಇರುವುದರಿಂದ ಹಾಗೂ